ಶ್ರೀ ಡಿ.ಬಿ.ಇನಾಂದರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಹೌದು.

ಆ) 2002-03ನೇ ಸಾಲಿಗೆ ಈ ಕೆಳಕಂಡ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ:

1. ಹಂಪಿಯ ಸಮಗ್ರ ಅಭಿವೃದ್ಧಿ - ರೂ. 30.63 ಕೋಟಿ
2. ಕರಾವಳಿ ಸಮಗ್ರ ಅಭಿವೃದ್ಧಿ - ರೂ. 6.95 ಕೋಟಿ
3. ಗ್ರಾಮೀಣ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಂಡ್ಯ ಜಿಲ್ಲೆಯ ಕೊಕ್ಕರೆ ಬೆಳ್ಳೂರು ಸಮಗ್ರ ಅಭಿವೃದ್ಧಿ - ರೂ.73.03 ಲಕ್ಷ
4. ಬೆಂಗಳೂರಿನ ಬಸವನಗುಡಿಯಲ್ಲಿನ ಬ್ಯೂಗಲ್‌ರಾಕ್ ಸಮಗ್ರ ಅಭಿವೃದ್ಧಿಗೆ ಅಂದಾಜು ವೆಚ್ಚ - ರೂ. 102.29 ಲಕ್ಷ

ಇ) ಇಲ್ಲ

## ಹೊಸ ಜಿಲ್ಲೆ ಹಾಗೂ ತಾಲ್ಲೂಕುಗಳ ರಚನೆ

1951 (2355) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಜಿಲ್ಲೆ ಹಾಗೂ ತಾಲ್ಲುಕುಗಳನ್ನು ರಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ:

ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆ ಹಾಗೂ ತಾಲ್ಲುಕುಗಳನ್ನು ರಚನೆ ಮಾಡಲಾಗುವುದು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಜಿಲ್ಲೆ ಹಾಗೂ ತಾಲ್ಲುಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಸಾಧಕಭಾದಕಗಳನ್ನು ಪರಿಶೀಲಿಸಲು ಮೂರು ಸಮಿತಿಗಳನ್ನು ರಚಿಸಲಾಗಿತ್ತು. ಈ ಮೂರು ಸಮಿತಿಗಳನ್ನು ಒಟ್ಟಾರೆ 11 ಹೊಸ ಜಿಲ್ಲೆಗಳ ಹಾಗೂ 30 ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಈ ಮೂರು ಸಮಿತಿಗಳ ಶಿಫಾರಸ್ಸುಗಳನ್ನು ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಿತು. ಅದರಂತೆ, ಈಗಾಗಲೇ 7 ಹೊಸ ಜಿಲ್ಲೆಗಳನ್ನು ಸೃಜಿಸಲಾಗಿದೆ.

ಹೊಸ ತಾಲ್ಲುಕುಗಳನ್ನು ರಚಿಸುವಾಗ ಅದಕ್ಕೆ ತಗಲುವ ವೆಚ್ಚ ಮತ್ತು ಇತರೆ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಹೊಸ ತಾಲ್ಲುಕುಗಳನ್ನು ರಚಿಸುವ ಬದಲು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರರ ನೇಮಕಾತಿ ಮಾಡಲು ತೀರ್ಮಾನ ತೆಗೆದುಕೊಂಡಿದೆ.

ಹೀಗಾಗಿ, ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

**ಲೋಕೋಪಯೋಗಿ ಇಲಾಖೆಯಲ್ಲಿ ಪಾವತಿ ಮಾಡಬೇಕಾಗಿರುವ ಹಣದ ವಿವರ**

1952 (2356) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಪಾವತಿ ಮಾಡಬೇಕಾಗಿರುವ ಬಾಕಿ ಹಣ (ಪೆಂಡಿಂಗ್ ಬಿಲ್ಲು) ಎಷ್ಟು: ಜಿಲ್ಲಾವಾರು ಮಾಹಿತಿ ನೀಡುವುದು;

ಆ) ಯಾವ ಯಾವ ಲೆಕ್ಕಶೀರ್ಷಿಕೆಯಲ್ಲಿ ಎಷ್ಟು ಬಾಕಿ ಹಣ ಕೊಡಬೇಕಾಗಿರುವುದು; ಲೋಕೋಪಯೋಗಿ ಇಲಾಖೆಯ ಉಪ ವಿಭಾಗಾವಾರು ಮಾಹಿತಿ ನೀಡುವುದು;

ಇ) ಬಾಕಿ ಹಣ ಪಾವತಿ ಮಾಡದಿರುವುದರಿಂದ ಬೆಳಗಾವಿ ಜಿಲ್ಲೆಯಲ್ಲಿ ತಗ್ಗುಗಳನ್ನು ತುಂಬದೇ ಇರುವ ಹಾಗೂ ತಗ್ಗು ತುಂಬುವ ಕೆಲಸ ಸ್ಥಗಿತಗೊಂಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೂಡಲೇ ಬಾಕಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ಮತ್ತು ತಗ್ಗುಗಳನ್ನು ತುಂಬಲು ಆದೇಶ ನೀಡಲಾಗುವುದೇ?

ಶ್ರೀ ಧರ್ಮಸಿಂಗ್ ( ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಲ್ಲಿ ಪಾವತಿ ಮಾಡಬೇಕಾಗಿರುವ ಬಾಕಿ ಹಣ (ಪೆಂಡಿಂಗ್ ಬಿಲ್ಲು) ರೂ. 24544.67 ಲಕ್ಷಗಳು, (ದಿನಾಂಕ 30-11-2002 ರ ಅಂತ್ಯಕ್ಕೆ) ಜಿಲ್ಲಾವಾರು ಮಾಹಿತಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಆ)

| ಲೆಕ್ಕ ಶೀರ್ಷಿಕೆ | ಬಾಕಿ ಇರುವ ಬಿಲ್ಲುಗಳ ಮೊತ್ತ (ರೂ.ಲಕ್ಷಗಳಲ್ಲಿ) |
|---|---|
| 1.5054 ರಸ್ತೆ ಮತ್ತು ಸೇತುವೆ (ಯೋಜನೆ) | 1739.03 |
| 2. 5054 ನಬಾರ್ಡ್ ಸಹಕಾರ | 3582.12 |
| 3. 5054 ಸಿ.ಆರ್.ಎಫ್. | 268.17 |
| 4. 3054 ರಸ್ತೆ ಮತ್ತು ಸೇತುವೆ (ಯೋಜನೇತರ) | 11864.93 |
| 5. ಕಟ್ಟಡಗಳು (ಯೋಜನೆ) | 1511.06 |
| 6. ಕಟ್ಟಡಗಳು (ಯೋಜನೇತರ) | 5579.36 |
| ಒಟ್ಟು | **24544.67** |

(ಉಪವಿಭಾಗಾವಾರು ಮಾಹಿತಿ ಪ್ರತ್ಯೇಕ ಪಟ್ಟಿಯಲ್ಲಿ ಲಗತ್ತಿಸಿದೆ.)